ಓ ಎಸ್ ನಂ.**299/2020**

ಪಿಡಬ್ಲ್ಯೂ.**2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **10.07.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಶ್ರೀ ಹೆಚ್ ವಿ ಎಸ್ ವಕೀಲರಿಂದಃ-

ನನ್ನ ತಂದೆಗೆ ಕುಮಾರ್ ಎಂಬ ತಮ್ಮ ಇದ್ದಾರೆ. ನನ್ನ ತಂದೆಗೆ ಐದು ಜನ ಅಕ್ಕ ತಂಗಿಯರು ಇದ್ದಾರೆ. ನಿಮ್ಮ ತಂದೆಯ ಸಹೋದರ ಸಹೋದರಿಯರನ್ನು ಈ ದಾವೆಯಲ್ಲಿ ಏಕೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಕೇವಲ ನಾನು ನನ್ನ ತಂದೆಯ ಆಸ್ತಿಯಲ್ಲಿ ಮಾತ್ರ ಭಾಗ ಕೇಳಿರುವುದರಿಂದ ಅವರುಗಳನ್ನು ಪಾರ್ಟಿ ಮಾಡಿಲ್ಲ ಎಂದು ಹೇಳುತ್ತಾರೆ. **1976** ರಲ್ಲಿ ನನ್ನ ತಂದೆ ಲಕ್ಷ್ಮಮ್ಮ ಎಂಬುವವರು ಸರ್ವೆ ನಂ. **204/2** ರ ಆಸ್ತಿಗೆ ಸಂಬಂಧಿಸಿದಂತೆ ದಾನ ಪತ್ರ ಮಾಡಿಕೊಟ್ಟಿರುವ ವಿಷಯ ನನಗೆ ತಿಳಿಯಿತು. ಸದರಿ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿದ್ದಾರಾ ಎಂದರೆ ಗೊತ್ತಿಲ್ಲ. ನಮ್ಮ ಊರಿನವರು ದಾನ ಪತ್ರದ ಬಗ್ಗೆ ತಿಳಿಸಿದಾಗ ನಾವು ಪೊಲೀಸ್ ಠಾಣೆಗೆ ಹೋಗಿ ಸುಮಾರು ಒಂದೂವರೆ ವರ್ಷದ ಹಿಂದೆ ನನ್ನ ತಂದೆ ಹಾಗೂ ಲಕ್ಷ್ಮಮ್ಮ ನವರ ವಿರುದ್ದ ದೂರು ಕೊಟ್ಟಿರುತ್ತೇವೆ. ಲಕ್ಷ್ಮಮ್ಮ ಮೃತಪಟ್ಟು **5** ವರ್ಷವಾಗಿದೆ. ಕುಮಾರ್ ರವರು ನನ್ನ ಚಿಕ್ಕಪ್ಪ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಅವರನ್ನು ವಂಶವೃಕ್ಷದಲ್ಲೂ ಸಹ ಸೇರಿಸಿಲ್ಲ. **1976** ರ ದಾನ ಪತ್ರವನ್ನು ನೋಡಿದ್ದೇನೆ. ಸದರಿ ಪತ್ರವು ಇಂಗ್ಲೀಷನಲ್ಲಿ ಬರೆದಿರಬಹುದು.

ನನ್ನ ತಂದೆಗೆ ಒಟ್ಟು ಮೂರು ಜನ ಮಕ್ಕಳು. ಅವರೆಂದರೆ ನಾನು, ಪುಟ್ಟರಾಜು ಮತ್ತು ಗುರುಪ್ರಸಾದ್. ನನ್ನ ತಂದೆ **2** ನೇ ಹೆಂಡತಿಯಾದ ಲಕ್ಷ್ಮಮ್ಮನಿಗೆ ಮೂರು ಜನ ಮಕ್ಕಳು ಇರಬಹುದು. ಅವರ ಬಗ್ಗೆ ನಾವು ಹೆಚ್ಚಿಗೆ ತಿಳಿದುಕೊಂಡಿಲ್ಲ. ನನ್ನನ್ನು ದೊಡ್ಡಬಳ್ಳಾಪುರಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ನನ್ನ ತಂದೆ ಅವರ ಕುಟುಂಬದಿಂದ ಸುಮಾರು **40** ವರ್ಷದಿಂದ ಬೇರೆ ಇದ್ದಾರೆ. ನಿಮ್ಮ ತಂದೆಯನ್ನು ಸಾಕಿ ಸಲಹಿದ್ದೀರಾ ಎಂದರೆ ಸಾಕ್ಷಿಯು ಅವರು ನಮ್ಮ ಹತ್ತಿರ ಒಂದು ದಿನ ಕೂಡ ಬಂದಿಲ್ಲ ಮತ್ತು ನನ್ನ ಮದುವೆಗೂ ಕೂಡ ಬಂದಿಲ್ಲ ಎಂದು ಹೇಳುತ್ತಾರೆ. ನಾನು

ಓ ಎಸ್ ನಂ.**299/2020**

ಪಿಡಬ್ಲ್ಯೂ.**2**

ಹಿರಿಯ ನಾಗರೀಕರ ಯೋಗಕ್ಷೇಮ ನೋಡದೆ ಅವರ ಆಸ್ತಿಯಲ್ಲಿ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಚಿಕ್ಕ ಮಕ್ಕಳು ಇದ್ದಾಗಲೇ ನಮ್ಮ ಯೋಗಕ್ಷೇಮ ನೋಡದೆ ಬಿಟ್ಟು ಹೋಗಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಕೂಡ ಜಮೀನಿನ ಬೆಲೆ ಜಾಸ್ತಿಯಾದ ಕಾರಣ ಪ್ರತಿವಾದಿಯವರಿಗೆ ತೊಂದರೆ ಕೊಡಲು ಈ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಅಸ್ತಿಯು ಪಿತ್ರಾರ್ಜಿತ ಅಸ್ತಿ ಎಂದು ತೋರಿಸಲು ಪಹಣಿ ಮತ್ತು ವಂಶವೃಕ್ಷ ವನ್ನು ಹಾಜರುಪಡಿಸಿದ್ದೇವೆ. ನನ್ನ ತಂದೆಯ ತಾಯಿ ಪುಟ್ಟಲಕ್ಷ್ಮಮ್ಮ ಮೃತಪಟ್ಟು **20** ವರ್ಷವಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ : ಚಂದ್ರಪ್ಪ , ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಯಾರು ಇದ್ದಾರೆಂದು ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಆಸ್ತಿ ಹೊಡೆಯುವ ಉದ್ದೇಶದಿಂದ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.